ಪಿಡಬ್ಲ್ಯೂ:1 **ಪಿಸಿಆರ್** .ನಂ. 7964-2023

ಪಿಡಬ್ಲ್ಯೂ:1 **ಪಿಸಿಆರ್** .ನಂ. 7964-2023

**ದಿನಾಂಕಃ 11.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಕೀಲರಿಂದಃ**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ನ್ಯಾಯಾಲಯಕ್ಕೆ ತಲುಗು ಭಾಷೆ ಬರುವುದರಿಂದ ಅವರು ನುಡಿದಿರುವ ಸಾಕ್ಷ್ಯವನ್ನು ಕನ್ನಡದಲ್ಲಿ ತರ್ಜುಮೆ ಮಾಡಿರುತ್ತಾರೆ.)

ಪಿರ್ಯಾದಿದಾರರು ಈಗಲೂ ಆರೋಗ್ಯವಾಗಿದ್ದಾರೆ. ಸಾಮಾನ್ಯ ಅದಿಕಾರ ಪತ್ರದಲ್ಲಿ ನಮೂದಿಸಿರುವ ಭೂಪಸಂದ್ರ ವಿಳಾಸದಲ್ಲಿ ಪಿರ್ಯಾದಿದಾರರು ವಾಸವಿರುತ್ತಾರೆಂದರೆ ಸರಿ. ಕೃಷ್ಣಪ್ರಸಾದ ಅವರು ಹನಿವೆಲ ಟೆಕ್ನಾಲಜೀಸ ನಲ್ಲಿ ವೈಸ ಪ್ರೆಸಿಂಡೆಂಟ ಆಗಿ 2022-2023 ರಲ್ಲಿ ನಿವೃತ್ತಿ ಹೊಂದಿರುತ್ತಾರೆ, ಈಗ ಸುಮಾರು ಐಟಿ ಕಂಪನಿಗಳಿಗೆ ಕನ್ಸಲಟೆಂಟ ಅಂಡ್

ಅಡ್ಜೈಸರ ಆಗಿರುತ್ತಾರೆ. ಪಿರ್ಯಾದಿದಾರರು ಬೇರೆ ನ್ಯಾಯಾಲಯದಲ್ಲಿ ಯಾವ ಪ್ರಕರಣದಲ್ಲೂ ಹಾಜರು ಇಲ್ಲ.

ಪಿರ್ಯಾದಿದಾರರು ನನ್ನ ಬಾವಮೈದುನ ಆಗಬೇಕು. ನಾನು ಮೊದಲು ವಕೀಲರಾಗಿ ಕೆಲಸ ಮಾಡುತ್ತಿದ್ದೆ ಹೀಗ್ಗೆ 20 ವರ್ಷದಿಂದ ನಿವೃತ್ತಿಯಾಗಿರುತ್ತೇನೆ. ನಾನು ವಕೀಲರಾಗಿದ್ದರಿಂದ ನನಗೆ ಕಾನೂನಿನ ತಿಳುವಳಿಕೆ ಇರುತ್ತದೆಂದರೆ ಸರಿ. ಪಿರ್ಯಾದಿದಾರರಿಗೆ ಹಾಗೂ ನನಗೆ ನೋಟೀಸು ಕೊಟ್ಟ ನಂತರ ಇಷ್ಟು ದಿನದ ಒಳಗಾಗಿ ಪ್ರಕರಣ ದಾಖಲಿಸಬೇಕೆಂಬ ಕಾನೂನು ತಿಳುವಳಿಕೆ ಇರುತ್ತದೆಂದರೆ ಸರಿ.

ಪಿರ್ಯಾದಿದಾರರು ಸಾಮಾನ್ಯವಾಗಿ ಭಾರತ ದೇಶದಲ್ಲಿರುವುದಿಲ್ಲ ಅವರು ವ್ಯಾಪಾರಕ್ಕೋಸ್ಕರ ಹೆಚ್ಚಾಗಿ ಹೊರದೇಶಕ್ಕೆ ಹೋಗುತ್ತಿದ್ದರು ಆದ್ದರಿಂದ ಜಿಪಿಎ ನೀಡಿದರು. ಅದಿಕಾರ ಪತ್ರದ ಚಾಪಾ ಕಾಗದವನ್ನು ಕೃಷ್ಣ ಪ್ರಸಾದ ಅವರು ಖರೀದಿಸಿರುತ್ತಾರೆ. ನಿಸಿ-1ರ ಚಾಪಾ ಕಾಗದವನ್ನು ನಾನೇ ಖರೀದಿಸಿರುತ್ತೇನೆಂದರೆ ಸರಿಯಲ್ಲ.ದಿನಾಂಕ 20.06.2023 ರಂದು ಪಿರ್ಯಾದಿದಾರರು ನನಗೆ ಅದಿಕಾರ ಪತ್ರವನ್ನು ಬರೆಸಿಕೊಟ್ಟಿರುತ್ತಾರೆ. ಪ್ರಸ್ತುತ ಪ್ರಕರಣವನ್ನು ನಾನು ದಿನಾಂಕ 01.08.2023 ರಂದು ಸಲ್ಲಿಸಿರುತ್ತೇನೆ. ಅದಿಕಾರ ಪತ್ರ ನೀಡಿರುವ ತಕ್ಷಣವೇ ವಕೀಲರನ್ನು ಸಂಪರ್ಕಿಸಿ ಪ್ರಕರಣ ದಾಖಲಸಲು ನನಗೇನು ತೊಂದರೆ ಇರಲಿಲ್ಲ .

ನನ್ನ ಹಾಗೂ ಪಿರ್ಯಾದಿದಾರರ ನಡುವೆ ಯಾವುದೇ ಸಂಬಂದ ಇಲ್ಲ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರಸ್ತುತ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣ ಪ್ರಮಣ ಪತ್ರಕ್ಕೂ ಹಾಗೂ ನಾನು ಈಗ ನುಡಿಯುತ್ತಿರುವ ಸಾಕ್ಷ್ಯ ತದ್ವಿರುದ್ದವಾಗಿರುತ್ತದೆಂದರೆ ಸರಿಯಲ್ಲ. ಅದಿಕಾರಪತ್ರ ನೀಡಿರುವ ದಿನದಿಂದ ಪ್ರಸ್ತುತ ಪ್ರಕರಣ ದಾಖಲಿಸುವ ದಿನದ ವರೆಗೂ ವಕೀಲರನ್ನು ಸಂಪರ್ಕಿಸಲು ಯಾಕೆ ತಡವಾಯಿತೆಂದು ಪ್ರಸ್ತುತ ಪ್ರಕರಣದಲ್ಲಿ ಎಲ್ಲೂ ನಮೂದಿಸಿಲ್ಲವೆಂದರೆ ಸರಿ. ಅದಿಕಾರ ಪತ್ರಕ್ಕೆ ನೋಟರಿಯ ಬಳಿ ಸಹಿ ಮಾಡಿರುತ್ತೇನೆ. ನನ್ನ ದೂರಿನಲ್ಲಿರುವ ಅಂಶಗಳನ್ನು ಸೃಷ್ಟಿಸಿರುವುದರಿಂದ ಸದರಿ ವಿಚಾರಗಳನ್ನು ಅರ್ಜಿಯಲ್ಲಿ ನಮೂದಿಸಿಲ್ಲವೆಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣ ದಾಖಲಿಸುವುದಕ್ಕೆ ತಡವಾಗಿರುತ್ತದೆ ಅದಕ್ಕೆ ಯಾವುದೇ ಪೂರಕ ದಾಖಲಾತಿ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

(ಓ.ಹೇ.ಕೇ.ಸ.,)

**18ನೇ ಎ.ಸಿ.ಜೆ .ಎಂ.,**

**ಬೆಂಗಳೂರು.**